ಸಮಾನ, ಸುಳ್ಳು ಹೇಳೋದಿಲ್ಲ” ಎಂದು ಅಲ್ಲೊಬ್ಬ ಶಿಫಾರಸ್ಸು ಕೊಟ್ಟು ಬಿಟ್ಟ. ಮಗನ ಎತ್ತಿಕೊಂಡು ಪ್ರಶ್ನೆ ಕೇಳಿದ ಅನಾಮಿಕ ಪೊಲೀಸ್ ಎಂಬುದು ಅವರ ಜೀಪು ಬಂದು ನಿಂತಾಗಲೇ ಗೊತ್ತಾಗಿದ್ದು.

ಮುಂದೆ ಸರದ ರಗಳೆ ಸ್ಟೇಶನ್ನಿಗೆ ಶಿಫ್ಟ್ ಆಯಿತು. ನನಗೆ ಠಾಣೆಯ ತನಕ ಹೋಗುವ ಇರಾದೆ ಖಂಡಿತಾ ಇರಲಿಲ್ಲ. ಚಾಂದುವನ್ನು ಹಿಡಿಸಿ ಕೊಡುವ ಇರಾದೆಯೂ ನನ್ನೊಳಗೆ ಮೂಡಲಿಲ್ಲ. ಆದರೆ, ಚಾಂದ್‌ಪೀರನ ಅಣ್ಣನೊಬ್ಬ ಜೊತೆಗಿದ್ದ ಎಂಬುದಷ್ಟೇ ನನ್ನ ಕೊರೆಯುತ್ತಿತ್ತು. ‘‘ತನ್ನವರು ಯಾರೂ ಇಲ್ಲ. ತಾನೊಬ್ಬ ಅನಾಥ’’ ಎಂದು ಚಾಂದ್ ಈ ಹಿಂದೆ ಹೇಳಿದ್ದು ಹಾಗಾದರೆ ಸುಳ್ಳೆ? ನಾನು ಯೋಚಿಸತೊಡಗಿದೆ. ಒಂದು ಗಲಾಟೆ ಗಲ್ಲಿ ತಲುಪಿದ ಮೇಲೆ ನಮ್ಮ ಯಾವ ನಿಯಂತ್ರಣಗಳೂ ಅಲ್ಲಿರುವುದಿಲ್ಲ. ಜನ ಹೇಳಿದಂತೆ ಕೇಳಬೇಕಷ್ಟೆ.

ಮುಂದೆ ಸ್ಟೇಶನ್ನು ನನ್ನ ಇಡೀ ದಿನ ನುಂಗಿ ಹಾಕಿತು. ಎರಡು ಗಂಟೆ ಕಾಯಿಸಿ ಪ್ರತ್ಯಕ್ಷರಾದ ಇನ್‌ಸ್ಪೆಕ್ಟರ್ ಸಾಹೇಬರು ನನಗೇ ಮೊದಲು ಮಹಾ ಮಂಗಳಾರತಿ ಮಾಡಿದರು. “ನೀನ್ಯಾವ ಸೀಮೆ ಮೇಷ್ಟ್ರಯ್ಯ. ಹುಡುಗರಿಗೆ ಅದೇನು ಪಾಠ ಮಾಡ್ತೀಯಾ! ಮಗು ಕೊರಳಿಗೆ ಬಂಗಾರದ ಚೈನ್ ಹಾಕಿದ್ದೀಯಲ್ಲ, ಬುದ್ಧಿ ಬ್ಯಾಡವ ನಿನಗೆ. ನಿಮ್ಮಂತಹ ಬೇಜಬ್ದಾರಿ ಜನರಿಂದ ಪೊಲೀಸರ ಕೆಲಸ ಹೆಚ್ಚಾಗ್ತಿರೋದು. ಅಂದ್ಹಂಗೆ ಇವನೇ ಕದ್ದಿದ್ದಾನೆ ಅಂತ ನಿಮ್ಮ ಹತ್ರ ಏನಿದೆ ಎವಿಡೆನ್ಸು” ಎಂದರು.

“ನಾನು ಕಂಪ್ಲೇಂಟ್ ಕೊಡೊ ಇರಾದೆಯಲ್ಲೇ ಇರ್ಲಿಲ್ಲ ಸರ್. ಯಾರೋ ನಿಮ್ಮ ಕಡೆ ಪೊಲೀಸ್ರು ನನ್ನ ಮಗನ ವಿಚಾರಿಸಿ ಅವನು ಹೇಳಿಕೆ ಆಧಾರದ ಮೇಲೆ ಜೀಪು ಕರೆಸಿ ಇಲ್ಲಿಗೆ ಬರೋ ಹಂಗೆ ಮಾಡಿದ್ರು.” ಎಂದೆ. ಸರ ಕಳಕೊಂಡ ನಮ್ಮ ಅಹವಾಲೇ ಇಲ್ಲದೆ ತಾವೇ ಮೇಲೆಬಿದ್ದು ಎತ್ತಿ ತಂದ ಮರ್ಯಾದೆ ಇಲ್ಲದ ಕೇಸು ಇದೆಂದು ತಿಳಿದ ಮೇಲೆ ಇನ್‌ಸ್ಪೆಕ್ಟರ್ ಮೂಡು ಮತ್ತಷ್ಟು ಹಾಳಾಯಿತು. “ಲೇ, ಈ ಕೇಸು ಯಾವ ಬೀಟಿಗೆ ಬರುತ್ತೋ? ಯಾವನೋ ಅದು ಅಡ್ಡಕಸುಬಿ ಪಿಸಿ ಈ ರಗಳೇನ ಇಲ್ಲಿಗೆ ತಂದವನು” ಎಂದು ಬಿ.ಪಿ. ಏರಿಸಿಕೊಂಡರು. ರಾತ್ರಿ ನಿದ್ದೆಯಿಲ್ಲದ ಅವರ ಕಣ್ಣುಗಳು ಕೆಂಡದಂತೆ ಸುಡುತ್ತಿದ್ದವು. ಮುಖದ ಮೇಲೆ ಒರಟುತನ ಎದ್ದು ಕಾಣುತ್ತಿತ್ತು.

“ನಿಮ್ದೇನೂ ತಕರಾರು ಇಲ್ಲಂದ್ರೆ ಮತ್ತೆ ಹೋಗಿ ಮನೇಗೆ. ಈ ನನ್ಮಗನ್ನ ನಾವೊಂದಿಷ್ಟು ವಿಚಾರಿಸಿಕೊಳ್ತೀವಿ” ಎಂದು ಚಾಂದ್‌ಪೀರನ ಒಂದು ರೂಮಿಗೆ ಪೊಲೀಸರು ಆತ್ಮೀಯವಾಗಿ ಕರೆದುಕೊಂಡು ಹೋದರು. ಅಲ್ಲಿಂದ ನಾವು ಹೊರಡುವ ಮೊದಲೇ ರೂಮಿನೊಳಗಿಂದ ಧಬಾಧಬ್ ಹೊಡೆತಗಳೂ ಚಾಂದ್‌ಪೀರನ ನರಳಾಟವೂ ಕೇಳುತ್ತಿತ್ತು. ತಾಳಿವಿಹೀನ ಹೆಂಡತಿ ಸ್ಟೇಷನ್ನಿನ ಹೊರಗೆ ಗಂಡ, ಮಗನಿಗೆ ಏನಾಯಿತೋ? ಎಂದು ಆತಂಕದಿಂದ ಕಾಯುತ್ತಿದ್ದಳು. ಅನ್ಯಾಯವಾಗಿ ಒಬ್ಬ ಹುಡುಗನನ್ನು ಸ್ಟೇಷನ್ನಿನೊಳಗೆ ಸಿಕ್ಕಿಸಿದ, ಆತನನ್ನು ಹೊಡೆಸಿದ ನೋವು ಪಾಪಪ್ರಜ್ಞೆಯಾಗಿ ಈಗಲೂ ನನ್ನ ಕಾಡುತ್ತದೆ. ಕಳ್ಳ ಯಾರೆಂಬುದು ಇನ್ನೂ ತೀರ್ಮಾನವಾಗಿಲ್ಲ.


## ಕಲೀಮ್ ಉಲ್ಲಾ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳಿಂದ ಗುರುತಿಸಿಕೊಂಡಿದ್ದಾರೆ. ಪ್ರಕಟಿತ ಪುಸ್ತಕಗಳು: ‘ಕ್ಲಾಸ್ ಟೀಚರ್’, ‘ಬಾಡೂಟದ ಮಹಿಮೆ’. ಪ್ರಸ್ತುತ ಅವರು ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರು.